ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಶಿಕ್ಷೆ ಅತ್ಯಾಚಾರ ಪ್ರಕರಣ ...

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE: 21/12

# ಸೆಂಗರ್‌ಗೆ ಜೀವಾವಧಿ

ಪ್ರ.ವಾ. 21/12/19

## ಉನ್ನಾವ್ ಅತ್ಯಾಚಾರ ಪ್ರಕರಣ: ₹25 ಲಕ್ಷ ದಂಡ

ನವದೆಹಲಿ (ಪಿಟಿಐ): ಬಿಜೆಪಿಯಿಂದ ಉಚ್ಚಾಟನೆಗೊಂಡಿರುವ ಶಾಸಕ, ಉನ್ನಾವ್ ಅತ್ಯಾಚಾರ ಪ್ರಕರಣದ ಅಪರಾಧಿ ಕುಲ್‌ದೀಪ್‌ಸಿಂಗ್ ಸೆಂಗರ್‌ಗೆ ಜೀವಾವಧಿ ಶಿಕ್ಷೆ ಹಾಗೂ ₹ 25 ಲಕ್ಷ ದಂಡ ವಿಧಿಸಿ ದಹಲಿ ನ್ಯಾಯಾಲಯ ಶುಕ್ರವಾರ ತೀರ್ಪು ನೀಡಿದೆ.



ಬಾಲಕಿಯನ್ನು ಅಪಹರಿಸಿ ಅತ್ಯಾಚಾರ ನಡೆಸಿದ್ದ ಸೆಂಗರ್, ಸಾಯುವ ವರೆಗೆ ಜೈಲಿನಲ್ಲಿಯೇ ಇರಬೇಕಾಗುತ್ತದೆ. ದಂಡದ ಮೊತ್ತ ₹ 25 ಲಕ್ಷವನ್ನು ಒಂದು ತಿಂಗಳೊಳಗೆ ಪಾವತಿಸಬೇಕು. ಇದಲ್ಲದೆ ಹೆಚ್ಚುವರಿಯಾಗಿ ಸಂತ್ರಸ್ತೆಯ ತಾಯಿಗೆ ₹ 10 ಲಕ್ಷ ಪರಿಹಾರವನ್ನು ನೀಡಬೇಕು ಎಂದು ಜಿಲ್ಲಾ ನ್ಯಾಯಾಧೀಶ ಧರ್ಮೇಶ್ ಶರ್ಮಾ ಅವರು ತೀರ್ಪಿನಲ್ಲಿ ಹೇಳಿದ್ದಾರೆ.

ಶಿಕ್ಷೆಯನ್ನು ಕಡಿಮೆಗೊಳಿಸಲು ಸೆಂಗರ್ ಪರ ವಕೀಲರು ಮಾಡಿದ್ದ ಮನವಿಯನ್ನು ತಿರಸ್ಕರಿಸಿದ ನ್ಯಾಯಾಧೀಶರು, 'ಜನಪ್ರತಿನಿಧಿಯಾಗಿದ್ದ ಸೆಂಗರ್, ಜನರ ನಂಬಿಕೆಗೆ ದ್ರೋಹ ಎಸಗಿದ್ದಾನೆ. ಸಂತ್ರಸ್ತೆ ಹಾಗೂ ಆಕೆಯ ಕುಟುಂಬದವರಿಗೆ ಬೆದರಿಕೆ ಹಾಕಿದ್ದಾನೆ. ಆದ್ದರಿಂದ ಶಿಕ್ಷೆಯ ಪ್ರಮಾಣ ಕಡಿಮೆ ಮಾಡಲು ಯಾವುದೇ ಕಾರಣ ಕಾಣಿಸುತ್ತಿಲ್ಲ' ಎಂದಿದ್ದಾರೆ.

ಸಂತ್ರಸ್ತೆ ಮತ್ತು ಆಕೆಯ ಕುಟುಂಬದವರಿಗೆ ಇರುವ ಪ್ರಾಣ ಬೆದರಿಕೆಯ ಬಗ್ಗೆ ಮೂರು ತಿಂಗಳಿಗೊಮ್ಮೆ ಪರಿಶೀಲನೆ ನಡೆಸಬೇಕು ಎಂದು ಸಿಬಿಐಗೆ ಕೋರ್ಟ್ ಸೂಚಿಸಿದೆ. ಸಂತ್ರಸ್ತೆಯ ಕುಟುಂಬದವರಿಗೆ ದೆಹಲಿಯಲ್ಲಿ ಮಾಡಿರುವ ಬಾಡಿಗೆ ಮನೆಯ ವ್ಯವಸ್ಥೆಯನ್ನು ಇನ್ನೂ ಒಂದು ವರ್ಷ ಕಾಲ ಮುಂದುವರಿಸಬೇಕು, ಉತ್ತರಪ್ರದೇಶ ಸರ್ಕಾರವು ಮನೆ ಬಾಡಿಗೆಯ ರೂಪದಲ್ಲಿ ಪ್ರತಿ ತಿಂಗಳೂ ₹15,000ವನ್ನು ಅವರ ಕುಟುಂಬದವರಿಗೆ ನೀಡಬೇಕು ಎಂದೂ ಕೋರ್ಟ್ ಹೇಳಿದೆ.

ಸಹ ಆರೋಪಿಯಾಗಿದ್ದ ಮಹಿಳೆ ಶಶಿ ಸಿಂಗ್ ವಿರುದ್ಧ ಯಾವುದೇ ಸಾಕ್ಷ್ಯಾಧಾರ ಇಲ್ಲದ ಕಾರಣ ಅವರನ್ನು ಖುಲಾಸೆಗೊಳಿಸಲಾಗಿದೆ. 'ಸಹ ಆರೋಪಿಯ ವಿರುದ್ಧದ ಆರೋಪಗಳನ್ನು ಸಾಬೀತುಪಡಿಸುವಂಥ ಸಾಕ್ಷ್ಯಗಳನ್ನು ಒದಗಿಸಲು ಸಿಬಿಐ ವಿಫಲವಾಗಿದೆ. ಆಕೆ ಸಂದರ್ಭದ ಬಲಿಪಶು ಆಗಿದ್ದಂತೆ ಭಾಸವಾಗುತ್ತದೆ' ಎಂದು ಕೋರ್ಟ್ ಹೇಳಿದೆ.

ಇದೇ ಮಹಿಳೆಯ ಮೇಲೆ 2017ರ ಜೂನ್ 11ರಂದು ಇನ್ನೊಂದು ಅತ್ಯಾಚಾರ ನಡೆದಿರುವ ಬಗ್ಗೆ ಇನ್ನಷ್ಟೆ ವಿಚಾರಣೆ ಆರಂಭವಾಗಬೇಕಿದೆ.

ಪ್ರಕರಣದ ಹಾದಿ 7

### ಮುಖ್ಯಾಂಶಗಳು

- ಸಂತ್ರಸ್ತೆಯ ಕುಟುಂಬ ಇನ್ನೊಂದು ವರ್ಷ ಬಾಡಿಗೆ ಮನೆಯಲ್ಲಿರಲು ವ್ಯವಸ್ಥೆ
- ಬೆದರಿಕೆ ಕುರಿತು ಮೂರು ತಿಂಗಳಿಗೊಮ್ಮೆ ಪರಿಶೀಲನೆ ನಡೆಸಲು ಸಿಬಿಐಗೆ ಸೂಚನೆ

### ಅನ್ವಯವಾಗದ ಮರಣದಂಡನೆ

ಉನ್ನಾವ್ ಅಪಹರಣ ಹಾಗೂ ಅತ್ಯಾಚಾರ ಘಟನೆಯು 2012ರಲ್ಲಿ ನಡೆದಿತ್ತು. ಆಗ ಸಂತ್ರಸ್ತೆಯು ಬಾಲಕಿಯಾಗಿದ್ದಳು. ಆ ಕಾರಣಕ್ಕೆ ಸೆಂಗರ್ ವಿರುದ್ಧ ಪೋಕ್ಸೊ ಕಾಯ್ದೆಯಡಿಯಲ್ಲೂ ಪ್ರಕರಣ ದಾಖಲಿಸಲಾಗಿತ್ತು.

ಮಕ್ಕಳ ಮೇಲೆ ಅತ್ಯಾಚಾರ ನಡೆಸಿದವರಿಗೆ ಮರಣದಂಡನೆ ನೀಡಲು ಸಾಧ್ಯವಾಗುವಂತೆ 'ಪೋಕ್ಸೊ ಕಾಯ್ದೆ'ಗೆ 2019ರ ಆಗಸ್ಟ್ ತಿಂಗಳಲ್ಲಿ ತಿದ್ದುಪಡಿ ಮಾಡಲಾಗಿದೆ. ಆದರೆ, ಉನ್ನಾವ್ ಪ್ರಕರಣವು ಇದಕ್ಕೂ ಹಿಂದೆ ನಡೆದಿರುವುದರಿಂದ ಮರಣದಂಡನೆಯು ಅನ್ವಯವಾಗುವುದಿಲ್ಲ.

**ಮರಣದಂಡನೆ ನೀಡಬೇಕಿತ್ತು:** 'ಸೆಂಗರ್‌ಗೆ ಮರಣದಂಡನೆ ನೀಡಿದ್ದರೆ ನಮಗೆ ಸಂಪೂರ್ಣ ನ್ಯಾಯ ಸಿಕ್ಕಿದ ಸಮಾಧಾನವಾಗುತ್ತಿತ್ತು' ಎಂದು ಸಂತ್ರಸ್ತೆ ಕುಟುಂಬದವರು ಹೇಳಿದ್ದಾರೆ.

'ಆತ ಜೈಲಿನೊಳಗಿದ್ದರೂ ಭಯ ಇದ್ದೇ ಇದೆ. ಹೊರಬಂದ ಕೂಡಲೇ ನಮ್ಮನ್ನು ಮುಗಿಸಿಬಿಡಬಹುದು' ಎಂದು ಸಂತ್ರಸ್ತೆಯ ಸಹೋದರಿ ಹೇಳಿದ್ದಾರೆ.

ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ಅಪರಾಧ

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 21/12

# ಉನ್ನಾವ್ ಅತ್ಯಾಚಾರಿ ಸೆಂಗಾರ್‌ಗೆ ಜೀವಾವಧಿ



ನವದೆಹಲಿ: ಉನ್ನಾವ್ ಅತ್ಯಾಚಾರ ಪ್ರಕರಣದ ಅಪರಾಧಿ, ಬಿಜೆಪಿಯ ಉಚ್ಚಾಟಿತ ಶಾಸಕ ಕುಲದೀಪ್ ಸಿಂಗ್ ಸೆಂಗಾರ್‌ಗೆ ಜೀವನ ಪರ್ಯಂತ ಜೈಲು ವಾಸ ಶಿಕ್ಷೆ ನೀಡಲಾಗಿದೆ. ನವದೆಹಲಿಯ ತೀಸ್ ಹಜಾರಿಯ ಕೋರ್ಟ್ ಶುಕ್ರವಾರ ತೀರ್ಪು ನೀಡಿದೆ. ಜತೆಗೆ 25 ಲಕ್ಷ ರೂ. ದಂಡವನ್ನೂ ವಿಧಿಸಿದ್ದು, ಒಂದು ವೇಳೆ ಸೆಂಗಾರ್ ದಂಡದ ಮೊತ್ತ ಪಾವತಿ ಮಾಡದೇ ಇದ್ದರೆ ಉತ್ತರ ಪ್ರದೇಶ ಸರ್ಕಾರವೇ ಅದನ್ನು ನೀಡಬೇಕು ಎಂದು ಕೋರ್ಟ್ ಆದೇಶಿಸಿದೆ.

ಒಂದು ತಿಂಗಳ ಒಳಗಾಗಿ ಈ ಮೊತ್ತವನ್ನು 2017ರಲ್ಲಿ ನಡೆದ ಪ್ರಕರಣದ ಸಂತ್ರಸ್ತೆಗೆ ನೀಡಬೇಕು ಎಂದು ನ್ಯಾಯಾಧೀಶ ಧರ್ಮೇಶ್ ಶರ್ಮಾ ಶುಕ್ರವಾರ ಆದೇಶಿಸಿದ್ದಾರೆ. ಜತೆಗೆ ಹೆಚ್ಚುವರಿಯಾಗಿ 10 ಲಕ್ಷ ರೂ. ಮೊತ್ತವನ್ನು ಮಹಿಳೆಯ ತಾಯಿಗೆ ನೀಡಬೇಕು ಎಂದಿದ್ದಾರೆ.

'ಜೀವಾವಧಿ ಶಿಕ್ಷೆ ಅನುಭವಿಸಲಿರುವ ಆಪಾದಿತ ಮುಂದಿನ ದಿನಗಳಲ್ಲಿ ಸಹಜವಾಗಿ ಏನೇನು ಬದಲಾವಣೆಗಳು ಉಂಟಾಗಲಿವೆಯೋ ಅದನ್ನು ತಿಳಿದುಕೊಳ್ಳಲಿ' ಎಂದು ನ್ಯಾಯಾಧೀಶರು ಹೇಳಿದ್ದಾರೆ.

'ಸಾರ್ವಜನಿಕರ ಸೇವಕನಾಗಿ ಸೆಂಗಾರ್ ತಮ್ಮ ಮೇಲೆ ಜನರು ಇಟ್ಟಿದ್ದ ನಂಬಿಕೆ ಹುಸಿಗೊಳಿಸಿದ್ದಾರೆ. ▸ 6ನೇ ಪುಟಕ್ಕೆ

# ಉನ್ನಾವ್ ಅತ್ಯಾಚಾರಿ ಸೆಂಗಾರ್‌ಗೆ ಜೀವಾವಧಿ

1ನೇ ಪುಟದಿಂದ ▸ ಹೀಗಾಗಿ ನ್ಯಾಯಾಲಯಕ್ಕೆ ಅವರ ಶಿಕ್ಷೆಯ ಪ್ರಮಾಣ ಕಡಿಮೆ ಮಾಡಬೇಕು ಎಂಬುದಕ್ಕೆ ಸಮರ್ಥನೆಗಳೇ ಸಿಗುತ್ತಿಲ್ಲ' ಎಂದು ನ್ಯಾಯಾಧೀಶರು ಹೇಳಿದ್ದಾರೆ.

**ಸಿಬಿಐಗೆ ಸೂಚನೆ:** ಪ್ರಕರಣದ ತನಿಖೆ ನಡೆಸಿರುವ ಸಿಬಿಐಗೆ ಸೂಚನೆ ನೀಡಿದ ನ್ಯಾಯಾಧೀಶರು ಪ್ರತಿ ಮೂರು ತಿಂಗಳಿಗೆ ಒಮ್ಮೆ ಅಪ್ರಾಪ್ತ ವಯಸ್ಸಿನ ಸಂತ್ರಸ್ತೆ ಮತ್ತು ಆಕೆಯ ಕುಟುಂಬಕ್ಕೆ ಸೆಂಗಾರ್ ಬೆಂಬಲಿಗರಿಂದ ಬೆದರಿಕೆ, ಪ್ರಭಾವ ಬೀರುವ ಬಗ್ಗೆ ಬೆಳವಣಿಗೆಗಳು ನಡೆದಿವೆಯೇ ಎಂದು ಪರಿಶೀಲನೆ ನಡೆಸಬೇಕು ಎಂದು ಸೂಚಿಸಿದೆ. ಸದ್ಯ ಅವರು ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದು, ಭೋಗ್ಯಕ್ಕೆ ಪಡೆದಿರುವ ಅವಧಿ ಮುಕ್ತಾಯವಾಗುತ್ತಿದ್ದಂತೆ ಅದನ್ನು ಮುಂದುವರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದೆ. ಏನಾದರೂ ತುರ್ತು ಸಂದರ್ಭದಲ್ಲಿ ಮಹಿಳೆ ಮತ್ತು ಆಕೆಯ ಕುಟುಂಬಸ್ಥರು ದೆಹಲಿ ಕಾನೂನು ಸೇವೆಗಳ ಪ್ರಾಧಿಕಾರ, ದೆಹಲಿ ಜಿಲ್ಲಾ ಮಟ್ಟದ ಸಾಕ್ಷ್ಯಗಳ ರಕ್ಷಣಾ ಸಮಿತಿಯ ನೆರವು ಪಡೆಯಬಹುದು ಎಂದಿದೆ.

**ಅತ್ತುಬಿಟ್ಟ ಅತ್ಯಾಚಾರಿ:** ತೀರ್ಪು ಪ್ರಕಟವಾಗುತ್ತಿದ್ದಂತೆ ಅತ್ಯಾಚಾರಿ ಶಾಸಕ ಸೆಂಗಾರ್ ಕೋರ್ಟ್ ಹಾಲ್‌ನಲ್ಲಿ ಅತ್ತು ಬಿಟ್ಟ. ಈ ಸಂದರ್ಭದಲ್ಲಿ ಆತನ ಪುತ್ರಿ, ಸಹೋದರಿ ಇದ್ದರು.

**ಕಠಿಣ ದಾರಿ:** 2017ರಲ್ಲಿ ಅತ್ಯಾಚಾರ ನಡೆದ ಬಳಿಕ ಸಂತ್ರಸ್ತೆ ನ್ಯಾಯಕ್ಕಾಗಿ ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಆರಂಭದಲ್ಲಿ ಪೊಲೀಸರು ಆಕೆಯ ದೂರನ್ನು ಸ್ವೀಕರಿಸಲು ನಿರಾಕರಿಸಿದ್ದರು. ನಂತರ ಆಕೆಯ ತಂದೆಯನ್ನು ಹಿಂಸಿಸಿ ಕೊಲ್ಲಲಾಯಿತು. ಆಕೆಯ ಸೋದರ ಸಂಬಂಧಿಯನ್ನು ಪ್ರಕರಣವೊಂದರಲ್ಲಿ ಸಿಲುಕಿಸಿ ಅಪರಾಧಿಯನ್ನಾಗಿಸಲಾಯಿತು. ಜತೆಗೆ ಅವರನ್ನು ಅಪಘಾತ ನಡೆಸುವ ಮೂಲಕ ಕೊಲ್ಲುವ ಪ್ರಯತ್ನವನ್ನೂ ಮಾಡಲಾಗಿತ್ತು. ಆರಂಭದಲ್ಲಿ ಸೆಂಗಾರ್ ಪರ ನಿಂತಿದ್ದ ಬಿಜೆಪಿ ನಂತರದ ದಿನಗಳಲ್ಲಿ ಆತನನ್ನು ಪಕ್ಷದಿಂದ ಉಚ್ಚಾಟನೆ ಮಾಡಿ, ಕೈತೊಳೆದುಕೊಂಡಿತ್ತು. ಸತತ ಒತ್ತಡದ ಬಳಿಕ 2018ರ ಏ.13ರಂದು ಆತನನ್ನು ಬಂಧಿಸಲಾಗಿತ್ತು.